# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು**

ಸಂಪುಟ 1 ಸಂಚಿಕೆ 34 Volume 1 Issue 34
Email: mahilavishesha@yahoo.com
web:www.mahilavishesha.in

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793

ಮಂಗಳವಾರ 19-04-2016
MAHILA VISHESHA

ಮೈಸೂರು
ಪುಟ 2
ಬೆಲೆ ₹ 2







## ಪ್ಲಾಸ್ಟಿಕ್ ಬಳಕೆ ಗ್ರಾಮಾಂತರದಲ್ಲೂ ನಿಲ್ಲಬೇಕು : ಸಿ. ಶಿಖಾ



ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ ಮಾಡಿರುವುದು ಅದಕ್ಕೆ ತಕ್ಕಂತೆ ನಾಗರೀಕರು ಸ್ಪಂದಿಸಲು ಆರಂಭಿಸಿದ್ದಾರೆ. ಆದೇ ರೀತಿ ಪ್ಲಾಸ್ಟಿಕ್ ನಿಷೇಧ ಗ್ರಾಮೀಣ ಪ್ರದೇಶದಲ್ಲಿ ಬಳಸಬಾರದಾಗಿ ಅರಿವು ಮೂಡಿಸಬೇಕೆಂದು ಮೈಸೂರು ಜಿಲ್ಲಾಧಿಕಾರಿ ಸಿ. ಶಿಖಾರವರು ತಿಳಿಸಿದ್ದಾರೆ. ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶ ಎರಡರಲ್ಲೂ ಪ್ಲಾಸ್ಟಿಕ್ ಬಳಸುವುದನ್ನು ನಿಲ್ಲಿಸಿದರೆ ಆರೋಗ್ಯಕರವೆಂದು ಜಿಲ್ಲಾಧಿಕಾರಿಗಳು ಅಭಿಪ್ರಾಯಿಸಿದ್ದಾರೆ.



ಬಾಲಿವುಡ್ ನಟಿ ಪ್ರಿಯಾಂಕ ಛೋಪ್ರಾಗೆ ಪದ್ಮಶ್ರೀ ಪ್ರಶಸ್ತಿಯನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಪ್ರದಾನ ಮಾಡುತ್ತಿರುವುದು



ಬೆಂಗಳೂರು ಚಿತ್ರಕಲಾ ಪರಿಷತ್‌ನಲ್ಲಿ ಕಲಾವಿದರು ಬಿಡಿಸಿದ ಚಿತ್ರಗಳನ್ನು ನೋಡುತ್ತಿರುವ ಪ್ರೇಕ್ಷಕರು



ಗಂಗಾವತಿಯ ಆಸ್ಪತ್ರೆಯ ಆವರಣದಲ್ಲಿ ಪುಟ್ಟ ಬಾಲಕಿಯೊಬ್ಬಳು ಕೊಳವೆಯಿಂದ ಪೋಲಾಗುತ್ತಿರುವ ನೀರನ್ನು ತುಂಬಿಸಿಕೊಳ್ಳುತ್ತಿರುವ ದೃಶ್ಯ

## ದೀಪಾಗೆ ಒಲಂಪಿಕ್ಸ್ ಅರ್ಹತೆ



ಭಾರತದ ಜೆಮ್ನಾಸ್ಟಿಕ್ಸ್ ಪಟು ದೀಪಾ ಕರ್ಮಾಕರ್ ಮುಂಬರುವ ಒಲಂಪಿಕ್ಸ್ ಅರ್ಹತೆ ಗಳಿಸಿದ್ದಾರೆ. ಐವತ್ತೆರಡು ವರ್ಷಗಳ ನಂತರ ಒಲಂಪಿಕ್ಸ್‌ನಲ್ಲಿ ಅವಕಾಶ ಪಡೆದ ಮೊಟ್ಟ ಮೊದಲ ಮಹಿಳಾ ಜೆಮ್ನಾಸ್ಟ್ ಎಂಬ ಹೆಗ್ಗಳಿಕೆ ಅವರದಾಯಿತು.

ಅರ್ಹತಾ ಸುತ್ತಿನ ಎಲ್ಲ ಸ್ಪರ್ಧೆಗಳಲ್ಲಿಯೂ 22 ವರ್ಷದ ತ್ರಿಪುರಾದ ದೀಪಾ ಕರ್ಮಾಕರ್ 14 ಪ್ರತಿಸ್ಪರ್ಧಿಗಳಿಂದ ಕಠಿಣ ಪೈಪೋಟಿ ಎದುರಿಸಿದರು. ಅಂತರಾಷ್ಟ್ರೀಯ ಜಿಮ್ನಾಸ್ಟಿಕ್ಸ್ ಫೆಡರೇಷನ್ ದೀಪಾರವರ ಆಯ್ಕೆಯನ್ನು ಘೋಷಿಸಿದೆ. ಇದು ಭಾರತದ ಜಿಮ್ನಾಸ್ಟಿಕ್ ಕ್ರೀಡಾ ಕ್ಷೇತ್ರಕ್ಕೆ ಅಪಾರವಾದ ಹೆಮ್ಮೆಯ ಸಂಗತಿಯಾಗಿದ್ದು ಅವರಿಗೆ ಎಲ್ಲ ಯಶಸ್ಸು ದೊರೆಯಲೆಂಬುದೇ ಕ್ರೀಡಾಭಿಮಾನಿಗಳ ಅಶಯ.



ಭಾರತೀಯ ವಿಜ್ಞಾನ ಸಂಸ್ಥೆಯ ಎರಡು ದಿನಗಳ ವಿಜ್ಞಾನ ಮೇಳದಲ್ಲಿ ತಾವು ಮಾಡಿದ ಮಾದರಿಯೊಂದಿಗೆ ಇರುವ ಚಿತ್ರ



ಬೆಂಗಳೂರು ಘಟಿಕೋತ್ಸವದಲ್ಲಿ ಹತ್ತು ಚಿನ್ನದ ಪದಕಗಳನ್ನು ಪಡೆದ ವಿದ್ಯಾರ್ಥಿನಿ ಡಾ. ನಿಶಾ ಜೈನ್ ಗೆ ಸ್ನೇಹಿತೆಯಿಂದ ಸಿಹಿ ಮುತ್ತು



ಬ್ರಿಟನ್ ರಾಣಿ ಕೇಟ್ ಮಿಡಲ್ಟನ್ ಹಾಗೂ ರಾಜ ವಿಲಿಯಂ ಗಂಗಾ ನದಿಯಲ್ಲಿ ಕಂಡು ಬಂದ ದೃಶ್ಯ

**ಈಗ ಬೇಸಿಗೆ ಕಾಲ ನೀರನ್ನು ಮಿತವಾಗಿ ಬಳಸಿ**

## ಟೇಬಲ್ ಟೆನ್ನಿಸ್‌ನಲ್ಲಿ ಹೊಸ ಭರವಸೆ ಮೂಡಿಸಿರುವ ಮಾಣಿಕಾ ಬಾತ್ರಾ

ಭಾರತದ ಮಟ್ಟಿಗೆ ಮಹಿಳೆಯರ ಟೇಬಲ್ ಟೆನಿಸ್‌ನಲ್ಲಿ ಇತ್ತೀಚೆಗೆ ಹೆಚ್ಚು ಚಾಲ್ತಿಯಲ್ಲಿರುವ ಹೆಸರು ಮಾಣಿಕಾ ಬಾತ್ರಾ. ದೆಹಲಿಯ ಈ ಆಟಗಾರ್ತಿ ಹೋದ ವಾರ ಹಾಂಕಾಂಗ್‌ನಲ್ಲಿ ನಡೆದ ಏಷ್ಯನ್ ಅರ್ಹತಾ ಟೂರ್ನಿಯಲ್ಲಿ ಪದಕ ಗೆಲ್ಲುವ ಮೂಲಕ ರಿಯೋ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡು ಹೊಸ ಭರವಸೆ ಮೂಡಿಸಿದ್ದಾರೆ.

ಮಾಣಿಕಾ ಈ ಟೂರ್ನಿಯ ಮೊದಲ ಪಂದ್ಯದಲ್ಲಿ ಪೂಜಾ ಸಹಸ್ರಬುದ್ಧೆ ಎದುರು ಸೋಲು ಕಂಡರೂ ಬಳಿಕ ನಡೆದ ಎರಡು ಪಂದ್ಯಗಳಲ್ಲಿ ಶಾಮಿನಿ ಹಾಗೂ ಮೌಮಾ ದಾಸ್ ಅವರನ್ನು ಮಣಿಸಿ ಈ ಸಾಧನೆ ಮಾಡಿದ್ದಾರೆ. ಮಾಣಿಕಾ ಅವರೊಂದಿಗೆ ಸೌಮ್ಯಜಿತ್ ಘೋಷ್ ಕೂಡ ಒಲಿಂಪಿಕ್ ಅರ್ಹತೆ ಸಾಧಿಸಿದ್ದಾರೆ. 20 ವರ್ಷದ ಮಾಣಿಕಾ ತನ್ನ ಐದನೇ ವಯಸ್ಸಿನಲ್ಲೇ ಟೇಬಲ್ ಟೆನಿಸ್ ಆಡಲು ಪ್ರಾರಂಭಿಸಿದ್ದರು. 'ನಾನು ಹುಟ್ಟುವುದಕ್ಕಿಂತ ಮೊದಲೇ ನನ್ನ ಅಕ್ಕ ಟೇಬಲ್ ಟೆನಿಸ್ ಆಟದಲ್ಲಿ ಪಳಗಿದ್ದಳು. ಅವಳೇ ನನಗೆ ಸ್ಫೂರ್ತಿ' ಎಂದು ಬಾತ್ರಾ ಇತ್ತೀಚೆಗೆ ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದರು.

ಚಿಲಿ ಓಪನ್ ಐಟಿಟಿಎಫ್ ಟೂರ್ನಿಯ 21 ವರ್ಷದೊಳಗಿನವರ ವಿಭಾಗದಲ್ಲಿ ಮಾಣಿಕಾ ಬೆಳ್ಳಿ ಗೆದ್ದುಕೊಂಡಿದ್ದಾರೆ. ಈ ಟೂರ್ನಿಯಲ್ಲಿ ಮಾಣಿಕಾ



ತಮಗಿಂತ ಮೇಲಿನ ರ್‍ಯಾಂಕಿಂಗ್ ಸ್ಥಾನದಲ್ಲಿರುವ (ವಿಶ್ವ ರ್‍ಯಾಂಕಿಂಗ್ 4 ನೇ ಸ್ಥಾನ) ಜಪಾನ್‌ನ ಕೌಸುಮಿ ಇಶಿಕಾವಾ ಅವರನ್ನು ಮಣಿಸಿ ಫೈನಲ್ ಪ್ರವೇಶಿಸಿದ್ದು ಹೆಚ್ಚು ಸುದ್ದಿಯಾಗಿತ್ತು.

ಫೈನಲ್‌ನಲ್ಲಿ ಜಪಾನ್‌ನ ಮೊರಿಜೊನೊ ಮಿಸಾಕಿ ಎದುರು ನಿರಾಸೆ ಕಂಡಿದ್ದರು. 2014 ರ ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದು 2016 ರ ಕಾಮನ್ ವೆಲ್ತ್ ಚಾಂಪಿಯನ್ ಷಿಪ್‌ನಲ್ಲಿ ಎರಡು ಬೆಳ್ಳಿ ಹಾಗೂ ಎರಡು ಕಂಚು ಗೆದ್ದು ಗಮನ ಸೆಳೆದರು.

ಇತ್ತೀಚೆಗೆ ಗುವಾಹಟಿಯಲ್ಲಿ ನಡೆದ 12 ನೇ ದಕ್ಷಿಣ ಏಷ್ಯನ್ ಕ್ರೀಡಾಕೂಟದಲ್ಲಿ ಮೂರು ಚಿನ್ನ ಹಾಗೂ ಒಂದು ಬೆಳ್ಳಿ ಗೆದ್ದುಕೊಂಡಿದ್ದು ಇವರ ಅಮೋಘ ಸಾಧನೆಯಾಗಿದೆ. ಇದೀಗ ಮಾಣಿಕಾ ಒಲಿಂಪಿಕ್ ಅರ್ಹತೆ ಸಾಧಿಸುವ ಮೂಲಕ ಮತ್ತೊಂದು ಮೈಲುಗಲ್ಲು ಸ್ಥಾಪಿಸಿದ್ದಾರೆ.

18 ವರ್ಷದೊಳಗಿನವರ ವಿಭಾಗದ ವಿಶ್ವ ರ್‍ಯಾಂಕಿಂಗ್‌ನಲ್ಲಿ ಬಾತ್ರಾ 37ನೇ ಸ್ಥಾನದಲ್ಲಿದ್ದಾರೆ. 21 ವರ್ಷದೊಳಗಿನವರ ವಿಭಾಗದಲ್ಲಿ 77ನೇ ಸ್ಥಾನ ಪಡೆದುಕೊಂಡಿದ್ದಾರೆ.

ವಿಶ್ವ ಜೂನಿಯರ್ ರ್‍ಯಾಂಕಿಂಗ್‌ನಲ್ಲಿ ಮಾಣಿಕಾ 100 ರೊಳಗಿನ ಸ್ಥಾನ ಪಡೆದ ಏಕೈಕ ಭಾರತದ ಆಟಗಾರ್ತಿ ಎನಿಸಿದ್ದಾರೆ. ಜೂನಿಯರ್ ವಿಭಾಗದಲ್ಲಿ ಅವರು ತಮ್ಮ ಅಮೋಘ ಸಾಮರ್ಥ್ಯದ ಆಟದ ಮೂಲಕ ಅಮೆರಿಕ, ಓಪನ್, ಸ್ಪೇನ್ ಹಾಗೂ ಜೂನಿಯರ್ ಓಪನ್‌ಗಳಲ್ಲಿ ಫೈನಲ್ ತಲುಪಿದ್ದರು.

ಇತ್ತೀಚೆಗೆ ನಡೆದ ಏಷಿಯನ್ ಜೂನಿಯರ್ ಟೇಬಲ್ ಟೆನ್ನಿಸ್ ಟೂರ್ನಿಯಲ್ಲಿ ಮಾಣಿಕಾ ಅವರ ಉತ್ತಮ ಆಟದಿಂದಾಗಿ ಭಾರತ ತಂಡ ಐದನೇ ಸ್ಥಾನ ಪಡೆದುಕೊಂಡಿತ್ತು. ನವೆಂಬರ್‌ನಲ್ಲಿ ಬಹರೇನ್ ನಲ್ಲಿ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ನಡೆಯಲಿದ್ದು ಇಲ್ಲಿ ಮಾಣಿಕಾ ಭಾರತಕ್ಕೆ ಪದಕ ತಂದುಕೊಡುವ ಭರವಸೆ ಹೊಂದಿದ್ದಾರೆ.

'ನಾನು ಒಮ್ಮೆ ಒಲಿಂಪಿಕ್ಸ್ ಅರ್ಹತೆ ಪಡೆದುಕೊಂಡರೆ ಖಂಡಿತವಾಗಿಯೂ ಪದಕ ಗೆದ್ದುಕೊಂಡೇ ಬರುತ್ತೇನೆ" ಎಂದು ಇತ್ತೀಚೆಗೆ ಸಂದರ್ಶನವೊಂದರಲ್ಲಿ ವಿಶ್ವಾಸದಿಂದ ಹೇಳಿಕೊಂಡಿದ್ದ ಬಾತ್ರಾ ಈ ಬಾರಿಯ ಒಲಿಂಪಿಕ್ಸ್ ನಲ್ಲಿ ಮಹಿಳೆಯರ ವಿಭಾಗದಲ್ಲಿ ಭಾರತದ ಪ್ರಮುಖ ಭರವಸೆ ಎನಿಸಿದ್ದಾರೆ.ಯುವ ಆಟಗಾರರಿಗೆ ಇವರು ಮಾದರಿಯಾಗಿದ್ದಾರೆ.

**ನುಡಿಮುತ್ತು**

ಕಾಲ ನಮಗೆ ಸೇರಿದ್ದು, ಅದನ್ನು ಸದುಪ ಯೋಗಪಡಿಸಿಕೊಂಡವನೇ ಶ್ರೀಮಂತ.

- ನೀತಿ ಸಾರ

**ಕವನ**

ಸಂದರ್ಭಕ್ಕೆ ಅರಿವಿರಲಿ,
ಗುರಿಯತ್ತ ಗಮನವಿರಲಿ
ಮಾತಿನಲ್ಲಿ ಹಿಡಿತವಿರಲಿ
ನೀ ನಗುವಾಗ ನನ್ನ ನೆನಪಿರಲಿ

**A ಟು Z ಜೀವನ**

Q - ನಿಂತು ಬೇಜಾರಾಗಿ ಹೋಯ್ತು ಇಂಟರ್‌ವ್ಯೂನಲ್ಲಿ
R - ರ್ಟಿಫಿಶಿಯಲ್ ಜೀವನ ಎಷ್ಟು ದಿನ ನಡೆಸೋದು
S - ಸೇಫ್ ಆಗೋಣ ಎಲ್ಲಾದ್ರೂ ಅಂದೆ
T - ಟರ್ ಕಲಿಸಿದ ಒಳ್ಳೆಯ ಪಾಠ ಅಡ್ಡ ಬರುತ್ತೆ

...ಮುಂದುವರಿಯುವುದು

**ವಿವೇಕನಂದರ ವಾಣಿ**

ಒಳ್ಳೆಯವರಾಗಿರುವುದು,
ಒಳ್ಳೆಯದನ್ನು ಮಾಡುವುದು,
ಇದೇ ಧರ್ಮದ ಸರ್ವಸ್ವ

## ಮಿತಿಯಿರಲಿ ಸಾಬೂನು ಬಳಕೆ

ಮಾರುಕಟ್ಟೆಯಲ್ಲಿ ಪ್ರತಿನಿತ್ಯ ಹೊಸಹೊಸ ಸಾಬೂನು ಉತ್ಪನ್ನಗಳು ಕಂಡುಬರುತ್ತಿದ್ದು, ಗ್ರಾಹಕರೂ ಸಹ ಅವುಗಳ ಮೋಹಕತೆಗೆ ಒಳಗಾಗಿ ಪದೇ ಪದೇ ತಮ್ಮ ನೆಚ್ಚಿನ ಸಾಬೂನನ್ನು ಬದಲಿಸುತ್ತಾ ತಮಗೇ ಅರಿವಿಲ್ಲದಂತೆ ತ್ವಚೆಯನ್ನು ಹಾಳುಮಾಡಿಕೊಳ್ಳುತ್ತಿರುತ್ತಾರೆ. ಇಂದು ಸಾಬೂನು ತಯಾರಿಕೆಯಲ್ಲಿ ಅನೇಕ ಅಪಾಯಕಾರಿಯಾದ ರಾಸಾಯನಿಕ ಅಂಶಗಳನ್ನು ಬಳಸುತ್ತಿದ್ದು ಅವುಗಳು ನಮ್ಮ ತ್ವಚೆಯ ಮೇಲೆ ದುಷ್ಪರಿಣಾಮ ಬೀರುವುದರಲ್ಲಿ ಅನುಮಾನವಿಲ್ಲ. ಅತಿಯಾದ ಸಾಬೂನಿನ ಬಳಕೆ ಹಾಗೂ ಪದೇ ಪದೇ ಸಾಬೂನು ಬದಲಿಸುವುದರಿಂದಾಗುವ ದುಷ್ಪರಿಣಾಮಗಳೆಂದರೆ

ಸಾಬೂನು ತಯಾರಿಕೆಯಲ್ಲಿ ಬಳಸುವ ಸೋಡಿಯಂ ಲಾರ್ಯೆಟ್ ಸಲ್ಫೇಟ್ ತ್ವಚೆಗೆ ಹಾನಿಕಾರಕ ಪರಿಣಾಮವನ್ನು ಉಂಟು ಮಾಡುತ್ತದೆ.

ಸಾಬೂನಿನಲ್ಲಿ ಕಾಸ್ಟಿಕ್ ಸೋಡಾವನ್ನು ಬಳಸಿರುತ್ತಾರಾದ್ದರಿಂದ ಅದು ಚರ್ಮದ ಕಾಂತಿ ಯನ್ನು ಹಾಳುಗೆಡುವುದಲ್ಲದೇ ತುರಿಕೆ ಯನ್ನುಂಟು ಮಾಡುತ್ತದೆ.

ಸಾಬೂನಿನ ಅತೀ ಬಳಕೆಯು ತ್ವಚೆಯನ್ನು ಹಾಳು ಮಾಡುವುದರ ಜೊತೆಗೆ ತ್ವಚೆಯಲ್ಲಿರುವ ಎಣ್ಣೆಯನ್ನು ಹೀರಿಕೊಂಡುಒಣ ತ್ವಚೆಯನ್ನಾಗಿಸುತ್ತದೆ.

ಅತಿಯಾದ ಸಾಬೂನಿನ ಬಳಕೆಯಿಂದ ಚರ್ಮವು ಸುಕ್ಕುಗಟ್ಟಿದಂತಾಗಿ, ಅವಧಿಗೂ ಮುನ್ನವೇ ವೃದ್ಧಾಪ್ಯ ಬಂದೊದಗಿದಂತಾಗುವುದು.

ಚರ್ಮದ ರೋಗನಿರೋಧಕ ಶಕ್ತಿಯನ್ನು ಕುಂಠಿತಗೊಳಿಸುತ್ತದೆ.

ಸಾಬೂನನ್ನು ಪದೇ ಪದೇ ಬಳಸುವುದರಿಂದ ಅದು ನಮ್ಮ ತ್ವಚೆಯಲ್ಲಿರುವ ಕೊಬ್ಬಿನ ಪದರವನ್ನು ನಾಶಮಾಡಿ, ಚರ್ಮವನ್ನು ಬ್ಯಾಕ್ಟೀರಿಯಾ ಹಾಗೂ ವೈರಸ್‌ಗಳಿಗೆ ತುತ್ತಾಗುವಂತೆ ಮಾಡುತ್ತದೆ.

ಅತಿಯಾದ ಸಾಬೂನಿನ ಬಳಕೆಯು ತ್ವಚೆಯ ರಂಧ್ರಗಳನ್ನುಮುಚ್ಚಿ,ತ್ಯಾಜ್ಯವು ವಿಸರ್ಜನೆಯಾಗುವುದನ್ನು ತಡೆಗಟ್ಟಿ,ಮೊಡವೆಗಳನ್ನು ಉಂಟು ಮಾಡಬಲ್ಲದು.

ತ್ವಚೆಯನ್ನು ಎಳೆಬಿಸಿಲಿಗೆ ಒಡ್ಡಿದಾಗ ಉಂಟಾಗುವ ಡಿ ಜೀವಸತ್ವವನ್ನು ಸಾಬೂನಿನಲ್ಲಿನ ರಾಸಾಯನಿಕಗಳು ನಾಶಮಾಡುವ ಮೂಲಕ ಚರ್ಮವನ್ನು ಕಾಂತಿಹೀನವನ್ನಾಗಿಸುತ್ತದೆ.

**ಇದು ನಿಮ್ಮ ಮಹಿಳಾ ಪತ್ರಿಕೆ**
**ಪ್ರೋತ್ಸಾಹಿಸಿ, ಬೆಳೆಸಿ**

## ಮೈಸೂರು ನಿವಾಸಿಗಳೇ ಚಿತ್ರಗಳನ್ನು ನೋಡಿ ಶಬಾಸ್ ಅಂದುಕೊಳ್ಳಿ



ನಗರ ಪಾಲಿಕೆಯ ಪೌರಕಾರ್ಮಿಕರು ಅರಮನೆಯ ಮುಂಭಾಗದಲ್ಲಿ ಬಿದ್ದಿರುವ ಕಸವನ್ನು ತೆರವು ಮಾಡುತ್ತಿರುವ ದೃಶ್ಯ



ಆರ್‌ಟಿಓ ಸರ್ಕಲ್‌ನಿಂದ ಡಬಲ್ ಟ್ಯಾಂಕ್ ಕಡೆಗೆ ಬರುವ ಮೊದಲ ಎಡಗಡೆ ರಸ್ತೆಯಲ್ಲಿ ಬಿದ್ದಿರುವ ಕಸ



ಕೃಷ್ಣ ಬೇಕರಿ ಹಾಗೂ ರಾಮಸ್ವಾಮಿ ಸರ್ಕಲ್‌ನ ಬಳಿ ಇರುವ ಸಣ್ಣ ರಸ್ತೆಯೊಂದರಲ್ಲಿ ಕಂಡು ಬರುವ ಕಸದ ದೃಶ್ಯ

ಜನಸಾಮಾನ್ಯರು, ಜನಪ್ರತಿನಿಧಿಗಳು, ಮಹಾನಗರಪಾಲಿಕಾ ಅಧಿಕಾರಿಗಳು ಹಾಗು ಪೌರಕಾರ್ಮಿಕರು ಎಲ್ಲರೂ ಒಟ್ಟಾಗಿ ಸೇರಿ ಕಸ ವಿಲೇವಾರಿ ಕೆಲಸವನ್ನು ಮಾಡಿದರೆ ಮುಂದೆಯೂ ಮೈಸೂರುನಗರಕ್ಕೆ ನಂ. 1 ಸ್ಥಾನ, ನಾಗರೀಕರು ನಂ. 1 ಸ್ಥಾನವನ್ನು ಬೇರೆ ನಗರದವರಿಗೆ ಬಿಟ್ಟುಕೊಡುವುದಾದರೆ ಬಿಟ್ಟು ಕೊಡಿ; ಉಳಿಸಿಕೊಳ್ಳುವುದಾದರೆ ಉಳಿಸಿಕೊಳ್ಳಿ.

## ಅರ್ಜಿ ಆಹ್ವಾನ

ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಹೆಚ್. ಆರ್. ಹುದ್ದೆಗಳಿಗಾಗಿ ನೇಮಕಾತಿ ನಡೆಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 29-04-16 ಹಾಗೂ ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ ನೋಡಬಹುದು.

## ಪರೀಕ್ಷೆಗೆ ತರಬೇತಿ

ಕೆಎಎಸ್ ನಡೆಸುವ 'ಎ'ಹಾಗೂ 'ಬಿ'ಗ್ರೂಪ್ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿಯನ್ನು ಕೃಷಿಕ ಸರ್ವೋದಯ ಪೌಂಡೇಶನ್‌ನಿಂದ ಆಯೋಜಿಸಲಾಗಿದೆ. ಮಾಹಿತಿಗಾಗಿ ಮೊ: 9945752592 ಸಂಪರ್ಕಿಸಬಹುದು.

**ಓದುಗರೇ ಗಮನಿಸಿ**

ಇದು ನಿಮ್ಮ ಪತ್ರಿಕೆ ತನು ಮನ ಧನ ನೀಡಬಯಸುವ ಉದಾರ ಮನಸ್ಸಿನ ವ್ಯಕ್ತಿಗಳು / ಸಂಸ್ಥೆಗಳು ಸಂಪರ್ಕಿಸಿ.ಅಭಿವೃದ್ದಿಗಾಗಿ ನೀಡಿರುವ ದಾನಿಗಳ ಹೆಸರನ್ನು ಪ್ರಕಟಿಸಲಾಗಿದೆ.

ಮೊ : 8880334444/ 9379777793

| | | |
|---|---|---|
| ಶ್ರೀಗೌರಿ | ತುಮಕೂರು | 1001/- |
| ಶೀತಲ್ | ತಿಪಟೂರು | 1001/- |
| ರಕ್ಷಿತಾ | ಮೈಸೂರು | 1001/- |
| ಅರತಿ | ಮೈಸೂರು | 1001/- |

– ಸಂಪಾದಕರು

**ಮೈಸೂರು ಮಹಾನಗರ ಪಾಲಿಕಾ ಕಚೇರಿ ದೂರವಾಣಿ ಸಂಖ್ಯೆಗಳು**

ಕಂಟ್ರೋಲ್ ರೂಂ 9449841196
ವಲಯ ಆಯುಕ್ತರು 1 – 9449841078
ವಲಯ ಆಯುಕ್ತರು 2 – 9449841079
ವಲಯ ಆಯುಕ್ತರು 3 – 9449841080
ವಲಯ ಆಯುಕ್ತರು 4 – 9449841104
ವಲಯ ಆಯುಕ್ತರು 5 – 9449841082
ವಲಯ ಆಯುಕ್ತರು 6 – 9449841230
ವಲಯ ಆಯುಕ್ತರು 7 – 9449841084
ವಲಯ ಆಯುಕ್ತರು 8 – 9449841197
ವಲಯ ಆಯುಕ್ತರು 9 – 9449841085

**ಮಾನ್ಯ ನಾಗರೀಕರೆ ನಿಮ್ಮ ಮನೆಯ ಕಸವನ್ನು ಮೂಲದಲ್ಲೆ ವಿಂಗಡಿಸಿ ಕಸದ ಗಾಡಿಗೆ ನೀಡಿರಿ**

**ಹುಟ್ಟು ಹಬ್ಬದ ಶುಭಾಷಯಗಳು**

| | | |
|---|---|---|
| ಅನುಪಮಾ | ಬೆಂಗಳೂರು | 21-04-2016 |
| ಶ್ಯಾಮಿಲಿ | ಬೆಂಗಳೂರು | 22-04-2016 |
| ರಕ್ಷಿತಾ | ಮೈಸೂರು | 23-04-2016 |
| ಇಂದಿರಾ | ಹಾಸನ | 24-04-2016 |
| ಕಲ್ಯಾಣಿ | ಹಾಸನ | 25-04-2016 |
| ಆರತಿ | ಮೈಸೂರು | 26-04-2016 |
| ಮಮತಾ | ಮಂಡ್ಯ | 27-04-2016 |
| ಶ್ರೀಗೌರಿ | ತುಮಕೂರು | 28-04-2016 |
| ಶೀತಲ್ | ತಿಪಟೂರು | 29-04-2016 |
| ದಿವ್ಯಶ್ರೀ | ಮೈಸೂರು | 30-04-2016 |

ಈ ಮಹಿಳಾ ಮಣಿಗಳ ಹುಟ್ಟುಹಬ್ಬಕ್ಕೆ ಮಹಿಳಾ ವಿಶೇಷ ಪತ್ರಿಕೆಯ ಬಳಗವು ಶುಭವನ್ನು ಕೋರಿದೆ

**ಓದುಗರೇ ಗಮನಿಸಿ**

ಇದು ನಿಮ್ಮ ಪತ್ರಿಕೆ ತನು ಮನ ಧನ ನೀಡಬಯಸುವ ಉದಾರ ಮನಸ್ಸಿನ ವ್ಯಕ್ತಿಗಳು / ಸಂಸ್ಥೆಗಳು ನಗದು/ ಬ್ಯಾಂಕ್ ಚೆಕ್ ರೂಪದಲ್ಲಿ ನಿಮ್ಮ ವಿವರಗಳೊಂದಿಗೆ ಇಚ್ಚೆಯುಳ್ಳವರು ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪಾದಕರನ್ನು ಸಂಪರ್ಕಿಸಿ. ಅಭಿವೃದ್ದಿಗಾಗಿ ನೀಡುವ ದಾನಿಗಳ ಹೆಸರನ್ನು ಆಯಾಯ ಸಂಚಿಕೆಯಲ್ಲೂ ಅಲ್ಲದೆ ನಿಮ್ಮ ಹುಟ್ಟಿದ ದಿನಾಂಕದಂದು ಶುಭಾಷಯವನ್ನು ತಿಳಿಸಲಾಗುತ್ತದೆ.

**ಮೊ : 8880334444**

**ಮಹಿಳಾ ವಿಶೇಷ**
ಕನ್ನಡ ಮಹಿಳಾ ಸುದ್ಧಿಯ
ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ)
ಮೈಸೂರು ಕಛೇರಿ :
c/o ಜನಶ್ರೀ ಸೋಲಾರ್
ಸಂಖ್ಯೆ : ಸಿ.ಹೆಚ್. 52, 7ನೇ ಮುಖ್ಯ ರಸ್ತೆ,
5ನೇ ಕ್ರಾಸ್, ಸರಸ್ವತಿಪುರಂ,
(ಸಿಂಡಿಕೇಟ್ ಬ್ಯಾಂಕ್ ಹಾಗೂ ವಿಜಯಾಬ್ಯಾಂಕ್ ಮಧ್ಯೆ)
ಮೈಸೂರು – 570 009
**ಹೆಚ್.ವಿ. ವೆಂಕಟಸುಬ್ಬರಾವ್, ಸಂಪಾದಕರು 8880334444**
(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)
Email : mahilavishesha@yahoo.com
web : www.mahilavishesha.in



**Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed by B.C. Meera and Printed at Annapoorna Offset Printer, # 511, 14th Main, Saraswathipuram, Mysore-570009.Published at # 1021, 14th Cross, 2nd Stage, Hebbal, Mysore-570017 Mob.:8880334444, E-mail:mahilavishesha@yahoo.com web:www.mahilavishesha.in Editor: H.V. Venkatasubbarao, Decl.No.: MAG.90/2015 -16**